ಜಿ.ಎಸ್. ಸದಾಶಿವ, ಜಿ.ಎನ್. ರಂಗನಾಥರಾವ್ ಮುಂತಾದ ಸಂಪಾದಕರು ಇಲ್ಲಿ ನೆನಪಾಗುತ್ತಿದ್ದಾರೆ. ತರಂಗದ ಆಗಿನ ಸಂಪಾದಕರಾಗಿದ್ದ ಸಂತೋಷಕುಮಾರ್ ಗುಲ್ವಾಡಿಯವರು ಲೇಖಕರ ಭಾವಚಿತ್ರಗಳನ್ನು ಅಚ್ಚಿಸಿ ನಮಗೆಲ್ಲ ಸ್ಟಾರ್ ಪಟ್ಟ ಸಿಕ್ಕಿತು. ಆತ್ಮಪ್ರಶಂಸೆಯ ಮಾತೇನೂ ಅಲ್ಲ; ಖ್ಯಾತ ಸಿನಿಮಾ ನಟರಿಗಿಂದು ಎಷ್ಟು ಅಭಿಮಾನಿ ಬಳಗವಿರುತ್ತದೋ ಅಷ್ಟು ಪ್ರಮಾಣದ ಓದುಗ ಅಭಿಮಾನಿಗಳ ಪ್ರೀತಿಯನ್ನು ಅಂದು ಸವಿದಿದ್ದೇನೆ. ನನ್ನ ಬ್ರಹ್ಮಚಾರಿ ಕೊಠಡಿಗೆ ಪ್ರತಿನಿತ್ಯ ಲೋಡುಗಟ್ಟಲೇ ಓದುಗರ ಪತ್ರಗಳನ್ನು ಹೊತ್ತು ಹಿರಿಯ ಅಂಚೆ ಅಣ್ಣನೊಬ್ಬ ಏದುಸಿರು ಬಿಡುತ್ತಾ ಸೈಕಲ್ಲೇರಿ ಬರುತ್ತಿದ್ದ ಚಿತ್ರವಿನ್ನೂ ನನ್ನ ಮನಸ್ಸಿನಲ್ಲಿದೆ. ಈ ಓದುಗ ವಲಯದಲ್ಲಿ ಮೂರು ಬಗೆಗಳಿದ್ದವು. ಕಥೆಗಳನ್ನು ಗಂಭೀರವಾಗಿ ಓದುವ ಸಾಹಿತ್ಯಾಸಕ್ತರು; ಯಾವ ವಿಮರ್ಶೆಗೂ ಒಳಪಡಿಸದೆ ಮುಗ್ಧ ಅಭಿಮಾನದಿಂದ ಓದಿ ಮುಂದಿನ ಕಥೆಗಾಗಿ ಕಾಯುವ ಓದುಗರು; ರಕ್ತದಲ್ಲಿ ಪತ್ರ ಬರೆದು ಅಭಿಮಾನವನ್ನು ತೀವ್ರವಾಗಿ ವ್ಯಕ್ತಪಡಿಸುವ, ಇಡೀ ಕಥೆಗೆ ಕಥೆಯನ್ನೇ ಪದ್ಯದಂತೆ ಕಂಠಪಾಠ ಮಾಡಿ ಹೇಳಬಲ್ಲ, ಕೆಲವು ಕಥೆಗಳನ್ನು ಓದಿ ರೆಕಾರ್ಡ್ ಮಾಡಿ ಕೆಸೆಟ್ ಕಳುಹಿಸುತ್ತಿದ್ದ ಉಗ್ರ ಅಭಿಮಾನಿಗಳು. ನಾನು ಮೊದಲ ಗುಂಪಿನ ಓದುಗರಿಗಾಗಿ ಹಂಬಲಿಸುತ್ತಿದ್ದೆ. ಆದರೆ, ಎರಡು ಮತ್ತು ಮೂರನೆ ಗುಂಪಿನ ಓದುಗವಲಯವೇ ಹೆಚ್ಚಾಗಿತ್ತು. ಕಿರುತೆರೆ, ಸಾಮಾಜಿಕ ಜಾಲತಾಣಗಳು ಪ್ರವೇಶ ಪಡೆಯದಿದ್ದ ಕಾರಣವೂ ಈ ಬಗೆಯ ಸನ್ನಿವೇಶಕ್ಕೆ ಪೂರಕವಾಗಿತ್ತೇನೋ.

**ಬಹುತೇಕ ಲಂಕೇಶರ 'ಅವ್ವ' ಕವಿತೆಯ ವಸ್ತುವಿನಂತಿರುವ ನನ್ನ ತಾಯಿ ಅಸಾಧಾರಣ ಹೆಂಗಸು. ಬನ್ನೇರಿ, ಪುಟ್ಟಕ್ಕನ ಮೆಡಿಕಲ್ ಕಾಲೇಜು, ವಲಸೆ ಹಕ್ಕಿ ಹಾಡುವಿನಲ್ಲಿ ಬರುವ ಹೊಂಬಾಳಮ್ಮ, ಗಾಯ ಕಥೆಯಲ್ಲಿ ಬರುವ ಗ್ರಾಮ್ಯ ಚಿತ್ರಣ, ನುಡಿಗಟ್ಟು, ಗಾದೆ, ರೂಪಕಗಳ ಬಳಕೆ ಇವೆಲ್ಲವೂ ಅವ್ವನ ಬಳುವಳಿ. ಮುಪ್ಪಿನಿಂದ ಕುಗ್ಗಿರುವ ನನ್ನವ್ವ ಈಗಲೂ ನನಗೊಂದು ಕೌತುಕದ ಸೆಲೆ.**

ಸಾಂಕೇತಿಕವಾಗಿ ಒಂದು ಘಟನೆಯನ್ನಿಲ್ಲಿ ವಿವರಿಸಬಹುದು. ಒಂದು ನಟ್ಟಿರುಳು ಮೈಸೂರು ಡೈರಿಯಲ್ಲಿ ಹಾಲಿನ ತೂಕ ಮುಗಿಸಿ ನೀಲಿ ಪ್ಯಾಂಟೆಲ್ಲಾ ಜಿಡ್ಡಾಗಿ ಸುಸ್ತಿನಿಂದ ಕುಳಿತಿರುವಾಗ ಸುಂದರ ಯುವತಿಯೊಬ್ಬಳು ಪ್ರತ್ಯಕ್ಷ. ದೂರದ ಗದಗಿನಿಂದ ರಾತ್ರಿ ಬಸ್ ಹಿಡಿದು ಬಂದಿದ್ದ ಆಕೆಯ ಮನವಿ ತನ್ನನ್ನು ಮದುವೆಯಾಗಬೇಕೆಂಬುದು. ತರಂಗದಲ್ಲಿ ಪ್ರಕಟವಾಗಿದ್ದ (1983) 'ಸರಸ್ವತಿಪುರದಲ್ಲೊಂದು ಹೆಬ್ಬೆಟ್ಟಿನ ಗುರುತು' ಕಥೆ ಆಕೆಗೆ ಹುಚ್ಚುಹಿಡಿಸಿತ್ತು. ಆಕೆಯ ಪ್ರೇಮಪತ್ರಗಳಿಗೆ ನಾನು ಪ್ರತಿಕ್ರಿಯೆ ತೋರಿರಲಿಲ್ಲವಾದ್ದರಿಂದ ಏಕಾಏಕಿ ಹೊರಟು ಬಂದಿದ್ದರು. ಬ್ಯಾಂಕ್ ಉದ್ಯೋಗಿ, ಇಂಗ್ಲಿಷ್ ಸಾಹಿತ್ಯ ಚೆನ್ನಾಗಿ ಓದಿದವರು, ಶ್ರೀಮಂತ ಕುಟುಂಬದ ಹಿನ್ನೆಲೆ. ನಾವು ಏಕೆ ಮದುವೆಯಾಗಬಾರದು? ಆಕೆಯ ಪ್ರಶ್ನೆ. ಏಕೆ ಮದುವೆಯಾಗಬೇಕು? ನನ್ನ ಪ್ರಶ್ನೆ. ಅಸ್ತಿತ್ವಕ್ಕೆ ಪರದಾಡುತ್ತಿದ್ದ, ಅನೇಕ ದೂರದ ಕನಸುಗಳನ್ನು ಹೊಂದಿದ್ದ ನನಗೆ ಮದುವೆಯನ್ನು